ಆರ್ ಬಿ ಐ / ೨೦೦೪–೦೫ / ೪೫೮
ಡಿಸಿಎಂ (ಯೋಜನೆ) ಸಂಖ್ಯೆ .ಜಿ ೪೦ / ೧೦.೦೧.೦೦/೨೦೦೪–೦೫

ಮೇ ೦೭,೨೦೦೫

ಅಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು / ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಸಾರ್ವಜನಿಕ ವಲಯ ಬ್ಯಾಂಕುಗಳು ಹಾಗೂ ಖಾಸಗಿ ವಲಯ ಬ್ಯಾಂಕುಗಳು, ವಿದೇಶಿ ಬ್ಯಾಂಕುಗಳು

ಮಾನ್ಯರೆ,

**ಹೆಚ್ಚಿನ / ಪರಿಷ್ಕೃತ ವೈಶಿಷ್ಟ್ಯಗಳನ್ನು ಹೊಂದಿರುವ ಭಾರತೀಯ ಬ್ಯಾಂಕ್ ನೋಟುಗಳು**

ಉನ್ನತ ಗುಣಮಟ್ಟದ ಖೋಟಾ ನೋಟುಗಳು, ವಿಶೇಷವಾಗಿ ೧೦೦ ರೂ. ಗಳ ಮತ್ತು ೫೦೦ ರೂ. ಗಳ ಖೋಟಾ ನೋಟುಗಳು ಹೆಚ್ಚಿನ ಪ್ರಮಾಣದಲ್ಲಿ ಚಲಾವಣೆಯಾಗುತ್ತಿರುವ ಹಿನ್ನಲೆಯಲ್ಲಿ ಭಾರತ ಸರ್ಕಾರವು ನಮ್ಮ ಬ್ಯಾಂಕ್ ನೋಟುಗಳಲ್ಲಿನ ಭದ್ರತಾ ವೈಶಿಷ್ಟ್ಯಗಳನ್ನು ಬಲಪಡಿಸುವ ಬಗ್ಗೆ ಪರಿಗಣಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಿತ್ತು. ಸಮಿತಿಯ ಶಿಫಾರಸುಗಳನ್ನು ಪರಿಶೀಲಿಸಿ, ಸರ್ಕಾರದ ಅನುಮೋದನೆಯೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕು ಹಾಲಿ ಇರುವ ನೋಟುಗಳಲ್ಲಿ ಕೆಲವು ಹೆಚ್ಚಿನ ಭದ್ರತಾ ವೈಶಿಷ್ಟ್ಯಗಳನ್ನು ಅಳವಡಿಸಲು ಮತ್ತು ಸುಧಾರಣೆಗಳನ್ನು ಮಾಡಲು ನಿರ್ಧರಿಸಿದೆ. ಹೊಸ ಸುಧಾರಿತ ಹೆಚ್ಚಿನ ಭದ್ರತಾ ವೈಶಿಷ್ಟ್ಯಗಳು ಖೋಟಾ ನೋಟು ಚಲಾವಣೆಯನ್ನು ತಡೆಯುವ ಸಾಧನವಾಗಿ ಕಾರ್ಯ ನಿರ್ವಹಿಸುವುದರ ಜೊತೆಗೆ ನೈಜ ಬ್ಯಾಂಕ್ ನೋಟುಗಳನ್ನು ಗುರುತಿಸಲು ಸಾರ್ವಜನಿಕರಿಗೆ ನೆರವಾಗುವಂತಹ ಕಣ್ಣಿಗೆ ಕಾಣುವಂಥ ವೈಶಿಷ್ಟ್ಯಗಳನ್ನು ಸಹ ಹೆಚ್ಚಿಸುತ್ತವೆ.

೨. ಹೆಚ್ಚಿನ / ಪರಿಷ್ಕೃತ ಭದ್ರತಾ ವೈಶಿಷ್ಟ್ಯಗಳುಳ್ಳ ಬ್ಯಾಂಕ್ ನೋಟುಗಳ ನೀಡಿಕೆಯು ಸದ್ಯದಲ್ಲೇ ಚಲಾವಣೆಗೆ ಬಿಡುವ ಗುರಿ ಹೊಂದಿದೆ. ೫೦ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಹೊಸ ಬ್ಯಾಂಕ್ ನೋಟುಗಳನ್ನು ೨೦೦೫ ರಲ್ಲಿ ಹಂತ ಹಂತವಾಗಿ ಪರಿಚಯಿಸಲಾಗುವುದು. ನಿಮಗೆ ತಿಳಿದಿರುವಂತೆ, ಕರೆನ್ಸಿಯ ಪರಿಶೀಲನೆ ಮತ್ತು ಪರಿಷ್ಕರಣೆ ಕಾರ್ಯ ಚಟುವಟಿಕೆಗಳನ್ನು ಆರ್‌ಬಿಐ ನಲ್ಲಿ ಯಾಂತ್ರೀಕರಿಸಲಾಗಿದೆ. ಕರೆನ್ಸಿಯನ್ನು ನಿರ್ವಹಿಸುವ ಸರಿಯಾದ ಮತ್ತು ಸಾಕಷ್ಟು ಸಂಖ್ಯೆಯ ಯಂತ್ರಗಳೊಂದಿಗೆ ತಮ್ಮನ್ನು ಸಜ್ಜುಗೊಳಿಸುವಂತೆ ಬ್ಯಾಂಕುಗಳಿಗೂ ಸಹಾ ಸಲಹೆ ನೀಡಲಾಗಿದೆ. ಇದರಿಂದ ಅಂತಿಮವಾಗಿ ವಿಲೆ ಮಾಡಲು ಬಳಕೆ ಯೋಗ್ಯವಲ್ಲದ ನೋಟುಗಳನ್ನು ಮಾತ್ರ ಆರ್ ಬಿ ಐ ಗೆ ಕಳುಹಿಸದಂತಾಗುತ್ತದೆ. ಕರೆನ್ಸಿಯ ನಿರ್ವಹಣೆಯನ್ನು ಯಾಂತ್ರೀಕರಿಸುವ ಕಾರ್ಯ ಬ್ಯಾಂಕುಗಳಲ್ಲಿ ಪ್ರಗತಿಯಲ್ಲಿದೆ. ಆದ್ದರಿಂದ, ಹಾಲಿ ಇರುವ ಭದ್ರತಾ ವೈಶಿಷ್ಟ್ಯಗಳಲ್ಲಿ ಮಾಡಲು ಉದ್ದೇಶಿಸಿರುವ ಬದಲಾವಣೆಗಳ ಅರಿವು ಬ್ಯಾಂಕುಗಳಿಗೆ ಇರಬೇಕಾದುದು ಕಡ್ಡಾಯವಾಗಿದೆ. ಇದರಿಂದ ತಮ್ಮ ಯಂತ್ರಗಳಲ್ಲಿ ಸೂಕ್ತವಾಗಿ ಅಳವಡಿಕೆ ಮಾಡಲು ಅವು ಪ್ರಯತ್ನಿಸಲು ಸಾಧ್ಯವಾಗುತ್ತದೆ. ರೂ ೫೦, ರೂ ೧೦೦, ರೂ ೫೦೦ ಮತ್ತು ರೂ ೧೦೦೦ ಮೌಲ್ಯದ ನೋಟುಗಳ ಹೊಸ / ಹೆಚ್ಚಿನ ಕಣ್ಣಿಗೆ ಕಾಣುವಂತಹ ಭದ್ರತಾ ವೈಶಿಷ್ಟ್ಯಗಳ ವಿವರಗಳನ್ನು ಇದಕ್ಕೆ ಲಗತ್ತಿಸಿದೆ ಭದ್ರತಾ ವೈಶಿಷ್ಟ್ಯಗಳ ಪಟ್ಟಿಯನ್ನು ಎಚ್ಚರಿಕೆಯಿಂದ ಅವಗಾಹನೆ ಮಾಡುವಂತೆ ಮತ್ತು ಅವುಗಳನ್ನು ಪರಿಶೀಲನೆ ಮಾಡಿಸುವಂತೆ ಹಾಗೂ ಈ ಬ್ಯಾಂಕ್ ನೋಟುಗಳ ನಿರ್ವಹಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಬ್ಯಾಂಕುಗಳಿಗೆ ಸಲಹೆ ಮಾಡಲಾಗಿದೆ.

೩. ಬ್ಯಾಕು ನೋಟುಗಳ ಭದ್ರತಾ ವೈಶಿಷ್ಟ್ಯಗಳಲ್ಲಿನ  ಬದಲಾವಣೆಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳಲು ಮತ್ತು ಸಮಗ್ರ ಸಿದ್ದತೆಯನ್ನು ಮಾಡಿಕೊಳ್ಳಲು ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯೊಂದನ್ನು ಸೂಕ್ತವಾದ ಒಂದು ದಿನ ಕರೆಯಲಾಗುವುದು. ಆ ಸಭೆಯ ಬಗ್ಗೆ ಪ್ರತ್ಯೇಕ ಸೂಚನೆ ನೀಡಲಾಗುವುದು. ಹೊಸ ನೋಟುಗಳನ್ನು ಚಲಾವಣೆಗೆ ತಂದ ಸಮಯದಲ್ಲಿ ರಿಸರ್ವ್ ಬ್ಯಾಂಕು ಈ ವೈಶಿಷ್ಟ್ಯಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಪ್ರಚಾರಾಂದೋಲನವನ್ನು ನಡೆಸುತ್ತದೆ ಎಂದು ಹೇಳಬೇಕಾದ ಅಗತ್ಯವಿಲ್ಲ.

**ತಮ್ಮ ವಿಶ್ವಾಸಿ,**

**ಸಹಿ/-**

**ಯು. ಎಸ್. ಪಾಲಿವಾಲ್**
**ಮುಖ್ಯ ಪ್ರಧಾನ ವ್ಯವಸ್ಥಾಪಕ**

ಅನುಬಂಧ

ರೂ ೫೦, ರೂ ೧೦೦, ರೂ ೫೦೦ ಮತ್ತು ರೂ ೧೦೦೦ ಮೌಲ್ಯದ ನೋಟುಗಳ ಹಾಲಿ ಇರುವ ಭದ್ರತಾ ವೈಶಿಷ್ಟ್ಯ ಗಳು ಮತ್ತು ಪರಿಷ್ಕೃತ / ಹೆಚ್ಚಿನ ಭದ್ರತಾ ವೈಶಿಷ್ಟ್ಯ ಗಳು

| ಕ್ರಸಂ | ವೈಶಿಷ್ಟ್ಯ | ನೋಟಿನ ವರ್ಗ | ಈಗ ಇರುವ ಲಕ್ಷಣ / ಭದ್ರತಾ ವೈಶಿಷ್ಟ್ಯ | ಪ್ರಸ್ತಾವಿಸಿರುವ ತಪಶೀಲು/ ಭದ್ರತಾ ವೈಶಿಷ್ಟ್ಯ |
|---|---|---|---|---|
| ೧. | ಕಾಗದ | ಎಲ್ಲಾ | ಬ್ಯಾಂಕು ನೋಟುಗಳನ್ನು ಅದ:ಸ್ತರ ಹತ್ತಿ ಮತ್ತು ಹತ್ತಿಯ ಚಿಂದಿಯಿಂದ ಕೂಡಿದ ವಿಶೇಷ, ವಾಟರ್ ಮಾರ್ಕ್ ಇರುವ ಕಾಗದದ ಮೇಲೆ ಮುದ್ರಿಸಲಾಗುತ್ತದೆ. ಇದು ನೋಟಿಗೆ ವಿಶಿಷ್ಟ ಸ್ಪರ್ಶಾಘನುಭವ ವನ್ನು ಮತ್ತು ಚಟವಟಗುಟ್ಟುವ ಶಬ್ದವನ್ನು ನೀಡುತ್ತದೆ<br>ಗ್ರಾಮೇಜ್<br>೧೦ರೂ ನಿಂದ ೫೦೦ ರೂ ನೋಟಿಗೆ ೮೫ ಜಿ ಎಸ್ ಎಂ ಮತ್ತು ೧೦೦೦ ರೂ ನೋಟಿಗೆ ೮೭.೫ ಜಿ ಎಸ್ ಎಂ<br>ಕ್ಯಾಲಿಪರ್ ದಪ್ಪ<br>೧೦ ರೂ. ನಿಂದ ೫೦೦ ರೂ. ನೋಟಿಗೆ ೧೦೦ ಮೈಕ್ರೋನ್ ಗಳು<br>೧೦೦೦ ರೂ ನೋಟಿಗೆ ೧೦೫ ಮೈಕ್ರೋನ್ ಗಳು | ಗ್ರಾಮೇಜ್<br>೧೦ ರೂ ನಿಂದ ೫೦೦ ರೂ ನೋಟಿಗೆ ೯೦ ಜಿಎಸ್ಎಂ(+೩)<br>ಕ್ಯಾಲಿಪರ್ ದಪ್ಪ<br>೧೦ ರೂ. ನಿಂದ ೧೦೦೦ ರೂ ನೋಟಿಗೆ ೧೧೦ ಮೈಕ್ರೋನ್ ಗಳು (+೫) |
| ೨. | ವಾಟರ್ ಮಾರ್ಕ್ | ಎಲ್ಲಾ | ಮಹಾತ್ಮಗಾಂಧಿ ವಾಟರ್ ಮಾರ್ಕ್, ವಾಟರ್ ಮಾರ್ಕ್ ವಿಂಡೋದಲ್ಲಿ ಬೆಳಕು ಮತ್ತು ನೆರಳು ಹೊಂದಾವಣಿ (ಪರಿಣಾಮ ) ಮತ್ತು ಬಹುವರ್ಣವಿನ್ಯಾಸದ ಸಹಿತ. ನೋಟನ್ನು ಬೆಳಕಿಗೆ ಎದುರಾಗಿ ಹಿಡಿದಾಗ ಈ ವೈಶಿಷ್ಟ್ಯವು ಸ್ಪಷ್ಟವಾಗಿ ಕಣ್ಣಿಗೆ ಕಾಣುತ್ತದೆ. | ಈಗ ಇರುವ ಭದ್ರತಾ ವೈಶಿಷ್ಟ್ಯವು ಮುಂದುವರೆಯುತ್ತದೆ |

| | | | | |
|---|---|---|---|---|
| ೩. | ರಹಸ್ಯ ವಾಟರ್ ಮಾರ್ಕ್ | ಎಲ್ಲಾ | ರಹಸ್ಯ ವಾಟರ್ ಮಾರ್ಕ್ ಖಃಖ ಎಂಬ ಅಕ್ಷರಗಳನ್ನು ಮತ್ತು ನೋಟಿನ ವರ್ಗದ ಸಂಖ್ಯೆಯನ್ನು ಒಳಗೊಂಡಿರುತ್ತದೆ | ಈಗ ಇರುವ ಭದ್ರತಾ ವೈಶಿಷ್ಟ್ಯವು ಮುಂದುವರೆಯುತ್ತದೆ |
| ೪. | ಭದ್ರತಾ ದಾರ | ರೂ ೧೦೦೦<br>ರೂ ೫೦೦<br>ರೂ ೧೦೦ | ರೂ ೧೦೦ ರೂ ಮತ್ತು೫೦೦ರೂ ನ ನೋಟುಗಳ ಮೇಲೆ ಓದಬಹುದಾದ, ಮಧ್ಯೆ ಮಧ್ಯೆ ಕಡಿದಂತೆ ಇರುವ ಭದ್ರತಾ ದಾರ 'ಭಾರತ್' (ಹಿಂದಿಯಲ್ಲಿ) ಮತ್ತು ಖಃಖ ಎಂಬ ಲೇಖನಗಳೊಂದಿಗೆ ಮುಂಬಾಗದಲ್ಲಿ ಬಿಟ್ಟು ಬಿಟ್ಟು ಇರುವಂತೆ ಕಾಣುತ್ತದೆ ಮತ್ತು ರೂ ೧೦೦೦ ರ ನೋಟುಗಳಿಗೆ ಹೆಚ್ಚುವರಿಯಾಗಿ ೧೦೦೦ ಅಂಕಿ ಇರುತ್ತದೆ. ಆದರೆ ಹಿಂಬದಿಯಲ್ಲಿ ಪೂರ್ಣವಾಗಿ ಸಮಗ್ರವಾಗಿರುತ್ತದೆ. ನೋಟನ್ನು ಬೆಳಕಿಗೆ ಎದುರಾಗಿ ಹಿಡಿದು ನೋಡಿದಾಗ ಅದು ಒಂದೇ ನಿರಂತರ ಗೆರೆಯಂತೆ ಕಾಣುತ್ತದೆ.<br>೧೦೦/- ರೂ ಮತ್ತು ೫೦೦/- ನೋಟುಗಳಲ್ಲಿನ ಭದ್ರತಾ ದಾರ ಯು ವಿ ಬೆಳಕಿನಲ್ಲಿ ಹಿಂಬದಿಯಿಂದ ನೋಡಿದಾಗ ನೀಲಿ ಬಣ್ಣದಲ್ಲಿ ಪ್ರದೀಪಿಸುತ್ತದೆ.<br>೧೦೦೦/- ರೂ ನೋಟುಗಳಲ್ಲಿ ಭದ್ರತಾ ದಾರವು ಯುವಿ ಬೆಳಕಿನಲ್ಲಿ ಹಿಂಬದಿಯಿಂದ ನೋಡಿದಾಗ ವಿಂಡೋದ ಕಣ್ಣಿಗೆ ಕಾಣುವ ಭಾಗದಲ್ಲಿ ಕಾಮನ ಬಿಲ್ಲಿನ ಬಣ್ಣದಲ್ಲಿ ಪ್ರದೀಪಿಸುತ್ತದೆ.<br>ಅಗಲ : ೧೦೦ ರೂ ಮತ್ತು ೫೦೦ ರೂ ನೋಟು ೧.೨ ಮಿಮೀ<br>೧೦೦೦ ರೂ ನೋಟು ೨ ಮಿ ಮೀ | ರೂ ೧೦೦ ಮತ್ತು ೫೦೦ರೂ ನ ನೋಟುಗಳ ಮೇಲೆ ಓದಬಹುದಾದ, ಮಧ್ಯೆ ಮಧ್ಯೆ ಕಡಿದಂತೆ ಇರುವ ಭದ್ರತಾ ದಾರ 'ಭಾರತ್' ( ಹಿಂದಿಯಲ್ಲಿ ) ಖಃಖ ಎಂಬ ಲೇಖನಗಳೊಂದಿಗೆ. ಯಂತ್ರ ಓದಬಲ್ಲ ಮಧ್ಯೆ ಮಧ್ಯೆ ಕಡಿದಂತೆ ಇರುವ ಲೋಹ ಲೇಪ ತೆಗೆದಿರುವ ಸ್ಪಷ್ಟ ಲಿಪಿಯ ಮ್ಯಾಗ್ನೆಟಿಕ್ ಭದ್ರತೆ ದಾರ ಮತ್ತು ೧೦೦೦ ರೂ ನೋಟುಗಳಿಗೆ ಹೆಚ್ಚಿಗೆಯಾಗಿ ೧೦೦೦ ಅಂಕಿ ಅನನ್ಯವಾದ ಬಣ್ಣದ ಪರಿವರ್ತನೆಯೊಂದಿಗೆ ದಾರದ ಬಣ್ಣವು ಬೇರೆ ಬೇರೆ ಕೋನಗಳಿಂದ ಅವಲೋಕಿಸಿದಾಗ ಹಸಿರಿನಿಂದ ನೀಲಿ ಬಣ್ಣಕ್ಕೆ ಪರಿವರ್ತನೆಯಾಗುತ್ತದೆ ಇದು ಹಿಂಬದಿಯಲ್ಲಿ ಹಳದಿ ಬಣ್ಣದಲ್ಲಿ ಪ್ರದೀಪಿಸುತ್ತದೆ ಮತ್ತು ಯು ವಿ ಬೆಳಕಿನಲ್ಲಿ ಮುಂಭಾಗದಲ್ಲಿ ಟೆಕ್ಸ್ ಟ್ ಪ್ರದೀಪಿಸುತ್ತದೆ.<br>ಅಗಲ ೧೦೦೦ ರೂ ಮತ್ತು ೫೦೦ ರೂ ನೋಟು ೩ ಮಿ ಮೀ ೧೦೦ ರೂ ನೋಟು ೨ ಮಿ ಮೀ |
| ೫. | ಭದ್ರತಾದಾರ | ರೂ ೫೦ | 'ಭಾರತ್' ( ಹಿಂದಿಯಲ್ಲಿ ) ಮತ್ತು ಖಃಖ ಎಂಬ ಲೇಖನಗಳೊಂದಿಗೆ,. ಓದಬಲ್ಲ, ನೀಲಿಬಣ್ಣದ | ಯಂತ್ರ ಓದಬಲ್ಲ, ಮಧ್ಯೆ ಮಧ್ಯೆ ಕಡಿದಂತೆ ಇರುವ ಭದ್ರತಾ ಲೋಹ ಲೇಪ ತೆಗೆದಿರುವ ಸ್ಪಷ್ಟವಾದ ಟೆಕ್ಸ್ ಟ್ |

| | | | | |
|---|---|---|---|---|
| | | | ಪ್ಲೋರೋಸೆಂಟ್ ಪೋಲಿ ಎಸ್ಟರ್ ವ್ಯಾಕ್ಯೂಂ ಲೋಹಲೇಪಿತ ಪೂರ್ಣವಾಗಿ ಸಮಗ್ರವಾಗಿರುವ ಭದ್ರತಾ ದಾರ<br><br>ಅಗಲ: ೧.೨ ಮಿ. ಮೀ | ಮ್ಯಾಗ್ನೆಟಿಕ್ ಭದ್ರತೆ ದಾರ'ಭಾರತ್' ( ಹಿಂದಿಯಲ್ಲಿ ) ಮತ್ತು ಖಃಖ ಎಂಬ ಲೇಖನಗಳ ಸಹಿತ. ಇದು ಯು. ವಿ. ಬೆಳಕಿನಲ್ಲಿ ಎರಡೂ ಬದಿಗಳಲ್ಲಿ ಹಳದಿ ಬಣ್ಣದಲ್ಲಿ ಪ್ರದೀಪಿಸುತ್ತದೆ.<br>ಅಗಲ ೧.೪ ಮಿ. ಮೀ |
| ೫ | ಎಲೆಕ್ಟ್ರೋಲೈಟ್ ವಾಟರ್ ಮಾರ್ಕ್ | ಎಲ್ಲ | ಈಗ ಅಸ್ತಿತ್ವದಲ್ಲಿಲ್ಲ | ಮಹಾತ್ಮಗಾಂಧಿ ವಾಟರ್ ಮಾರ್ಕ್‌ನ ಬದಿಯಲ್ಲಿ ನೋಟಿನ ವರ್ಗದ ಸಂಖ್ಯೆಯ ಹೈಲೈಟ್ ವಾಟರ್ ಮಾರ್ಕ್ ಇರುತ್ತದೆ. |
| ೬ | ಓಮ್ರಾನ್ ಆಂಟಿ ಫೋಟೋ ಕಾಪಿಯಿಂಗ್ ವೈಶಿಷ್ಟ್ಯ | ರೂ ೫೦ .ಮತ್ತು ಮೇಲ್ಪಟ್ಟ ನೋಟುಗಳು | ಪ್ರಸ್ತುತ ೫೦೦ ರೂ ಮತ್ತು೧೦೦ ರೂ ನೋಟುಗಳಲ್ಲಿ ಮಾತ್ರ ಇದೆ.<br>ಈ ವೈಶಿಷ್ಟ್ಯ ಉಳ್ಳ ಒಂದು ಬ್ಯಾಂಕ್ ನೋಟನ್ನು ಬಣ್ಣದ ನಕಲು ಮಾಡುವ ಯಂತ್ರದಿಂದ ನಕಲು ಮಾಡಿದಾಗ ವಿಭಿನ್ನ ಬಣ್ಣದ ಛಾಯೆ ಯೊಂದಿಗೆ ಮೂಡುತ್ತದೆ. ಈ ವೈಶಿಷ್ಟ್ಯವನ್ನು ಬಿ ಐ ಎಸ್ ಅಭಿವೃದ್ಧಿಪಡಿಸಿದ್ದು ರಿಸರ್ವ್ ಬ್ಯಾಂಕ್ ಮತ್ತು ಬಿ ಐ ಎಸ್ ನಡುವೆ ಆಗಿರುವ ಒಪ್ಪಂದದ ಬಲದ ಮೇಲೆ ಬ್ಯಾಂಕು ನೋಟುಗಳಲ್ಲಿ ಸೇರಿಸಲಾಗುವುದು | ೫೦ ರೂ ಮತ್ತು ೧೦೦ ರೂ ನೋಟುಗಳಲ್ಲಿ ಸಹಾ ಸೇರಿಸಲಾಗುವುದು |
| ೭. | ಮುದ್ರಣ ಮಾಡಿದ ವರ್ಷ | ಎಲ್ಲ | ಈಗ ಇಲ್ಲ | ಬ್ಯಾಂಕ್ ನೋಟಿನ ಹಿಂಬದಿಯಲ್ಲಿ ಮುದ್ರಣ ಹಂತದಲ್ಲಿ ಮುದ್ರಣ ಮಾಡಿದ ವರ್ಷವನ್ನು ಸೇರಿಸಲಾಗುವುದು |
| ೮. | ಕಣ್ ನೋಟಕ್ಕೆ ಬೇರೆ ಬೇರೆಯಾಗಿ | ರೂ ೫೦೦ ರೂ೧೦೦೦ | ನೋಟುಗಳ ಮಧ್ಯಭಾಗದಲ್ಲಿ ಮುದ್ರಿಸಿರುವ ನೋಟಿನ ವರ್ಗದ ಅಂಕಿಯಲ್ಲಿ ಅಳವಡಿಸಲಾಗಿದೆ. ಅಂಕಿಯ ಬಣ್ಣ ನೊಟನ್ನು ಸಪಾಟಾಗಿ ಹಿಡಿದು ನೋಡಿದಾಗ ಹಸಿರಾಗಿ ಕಾಣುತ್ತದೆ. | ಅಂಕಿಗಳ ಫಾಂಟ್ ಗಾತ್ರವನ್ನು ಇಳಿಸಲಾಗಿದೆ ಮತ್ತು ಬಣ್ಣದ ಪರಿವರ್ತನೆಯನ್ನು ಹೊಸ ಹಸಿರಿನಿಂದ ಹೊಸ ನೀಲಿಗೆ ಪರಿಷ್ಕರಿಸಲಾಗಿದೆ |

| | | | | |
|---|---|---|---|---|
| | ಕಾಣುವಂತಹ ಶಾಯಿ (ಓವಿಐ) | | ಆದರೆ, ನೋಟನ್ನು ತಿರುಗಿಸಿದಾಗ ನೀಲಿ ಬಣ್ಣಕ್ಕೆ ತಿರುಗುತ್ತದೆ. ಫಾಂಟ್ ಗಾತ್ರ ಈ ಮುಂದಿನಂತಿರುತ್ತದೆ.<br>ರೂ ೫೦೦ : ೧೩ ಮಿಮೀ ಥ ೩೦ ಮಿ. ಮೀ<br>( ೩೯೦ ಚ. ಮಿ. ಮೀ)<br>ರೂ ೧೦೦೦ : ೧೪.೫ ಮಿಮೀ ಥ ೩೯ ಮಿ. ಮೀ<br>( ೫೬೫.೫ ಚ. ಮಿ. ಮೀ) | ರೂ ೫೦೦ : ೧೨ ಮಿಮೀ ಥ ೨೭.೫ ಮಿ. ಮೀ<br>( ೩೩೦ ಚ. ಮಿ. ಮೀ)<br>ರೂ ೧೦೦೦ : ೧೨ ಮಿಮೀ ಥ ೩೪ ಮಿ. ಮೀ<br>( ೪೦೮ ಚ. ಮಿ. ಮೀ) |
| ೯. | ಸೀಥ್ರೂ ಎಫೆಕ್ಟ್ | ಎಲ್ಲಾ | . ವಾಟರ್ ಮಾರ್ಕ್ ಪಕ್ಕಕ್ಕಿರುವ ಲಂಬ ಪಟ್ಟಿಯ ಮಧ್ಯಭಾಗದಲ್ಲಿ ನೋಟಿನ ಮೇಲೆ ಮುಂಬದಿ ( ಬರಿದಾದ) ಮತ್ತು ಹಿಂಬದಿ (ಭರ್ತಿಯಾದ), ಎರಡೂ ಬದಿಗಳಲ್ಲಿ ಮುದ್ರಿತವಾಗಿರುವ ಸಣ್ಣ ಪುಷ್ಪ ವಿನ್ಯಾಸವು ನಿಖರವಾದ ಹಿಂಬದಿ ಮುಂಬದಿ ದಾಖಲಾತಿಯನ್ನು ಹೊಂದಿದೆ. ಬೆಳಕಿಗೆ ವಿರುದ್ಧವಾಗಿ ಹಿಡಿದು ನೋಡಿದಾಗ ಈ ವಿನ್ಯಾಸವು ಒದೇ ಪುಷ್ಪ ವಿನ್ಯಾಸವಾಗಿ ಕಂಡುಬರುತ್ತದೆ. | ಈಗ ಇರುವ ಭದ್ರತಾ ವೈಶಿಷ್ಟ್ಯ ಗಳು ಸುಧಾರಣೆಯೊಂದಿಗೆ ಮುಂದುವರೆಯುತ್ತವೆ |
| ೧೦. | ಅಂತರ್ಗತ ಪ್ರತೀಕ (ಬಿಂಬ) | ಎಲ್ಲಾ | ಮಹಾತ್ಮಗಾಂಧಿ ಭಾವ ಚಿತ್ರದ ಬಲ ಬದಿಯಲ್ಲಿನ ಲಂಬ ಪಟ್ಟಿಯು ಅಂತರ್ಗತ ಬಿಂಬವನ್ನು ಒಳಗೊಂಡಿದ್ದು ಸಂಬಂಧಿಸಿದ ನೋಟಿನ ವರ್ಗದ ಅಂಕಿಯನ್ನು ತೋರಿಸುತ್ತದೆ.ಅಂತರ್ಗತ ಬಿಂಬವು ನೋಟನ್ನು ಕಣ್ಣಿನ ಮಟ್ಟದಲ್ಲಿ ಸಮತಲವಾಗಿ ಹಿಡಿದು ನೋಡಿದಾಗ ಮಾತ್ರ ಕಣ್ಣಿಗೆ ಕಾಣುತ್ತದೆ | ಈಗ ಇರುವ ಭದ್ರತಾ ವೈಶಿಷ್ಟ್ಯಗಳು ಸುಧಾರಣೆಯೊಂದಿಗೆ ಮುಂದುವರೆಯುತ್ತವೆ |
| ೧೧ | ಅತಿ ಸಣ್ಣ ಅಕ್ಷರಾಂಕನ | ಎಲ್ಲಾ | ಅತಿ ಸಣ್ಣ ಅಕ್ಷರಾಂಕನದ ವೈಶಿಷ್ಟ್ಯವು ಲಂಬ ಪಟ್ಟಿಯ ಲಂಭ ಪಟೇಲ ಮತ್ತು ಮಹಾತ್ಮಾಗಾಂಧಿ ಭಾವ ಚಿತ್ರದ ನಡುವೆ ಕಾಣಬರುತ್ತದೆ. ಇದು ೧೦ ರೂ ನೋಟುಗಳಲ್ಲಿ ೧೦ ಅಂಕಿಯನ್ನು ಮತ್ತು ೨೦ ರೂ ಮತ್ತು ಅದಕ್ಕೂ ಹೆಚ್ಚಿನ ನೋಟುಗಳಲ್ಲಿ ಹೆಚ್ಚಿಗೆಯಾಗಿ ಖಃಖ ಅಕ್ಷರಗಳನ್ನು ಒಳಗೊಂಡಿರುತ್ತದೆ. ಈ ವೈಶಿಷ್ಟ್ಯವು ಭೂತಗನ್ನಡಿಯಿಂದ | ಈಗ ಇರುವ ಭದ್ರತಾ ವೈಶಿಷ್ಟ್ಯ ಗಳು ಮುಂದುವರೆಯುತ್ತವೆ |

| | | | | |
|---|---|---|---|---|
| | | | ನೋಡಿದಾಗ ಚೆನ್ನಾಗಿ ಕಾಣುತ್ತದೆ. | |
| ೧೨ | ಉತ್ಕೀರ್ಣ ( ಎತ್ತರಿಸದ) ಮುದ್ರಣ | ಎಲ್ಲಾ | ಬ್ಯಾಂಕಿನ ಹೆಸರು ಹಿಂದಿ ಮತ್ತು ಇಂಗ್ಲೀಷ್‌ನಲ್ಲಿ, ರಿಸರ್ವ್ ಬ್ಯಾಂಕ್ ಮೊಹರು, ಖಾತರಿ ಮತ್ತು ಭರವಸೆ ಖಂಡ, ಎಡಬದಿಯಲ್ಲಿ ಅಶೋಕಚಕ್ರ ಲಾಂಛನ, ಆರ್ ಬಿ ಐ ಗೌರ್ನರ್ ರವರ ಸಹಿ ಇವುಗಳನ್ನು ಉತ್ಕೀರ್ಣ ಅಂದರೆ ಎತ್ತರಿಸಿದ ಮುದ್ರಣದಲ್ಲಿ ಮುದ್ರಿಸಲಾಗಿರುತ್ತದೆ. ಇದನ್ನು ಸ್ಪರ್ಶಿಸಿ ಅನುಭವಿಸಬಹುದು. ಪ್ರಸ್ತುತ ಪ್ಲೇಟ್ ತಯಾರಿಕೆ ಹಂತದಲ್ಲಿ ಈ ಉತ್ತೀರ್ಣ ಮುದ್ರಣ ೮೦ ಮೈಕ್ರೋನ್‌ನಷ್ಟಿರುತ್ತದೆ<br>೫೦೦ ರೂ ಮತ್ತು ೧೦೦೦ ರೂ ನೋಟುಗಳಲ್ಲಿ ಎತ್ತರಿಸಿದ ಮುದ್ರಣವು ಹಿಂಬದಿಯಲ್ಲೂ ಇರುತ್ತದೆ. | ಎತ್ತರಿಸಿದ ಮುದ್ರಣದ ಸಂಯೋಜನೆಯನ್ನು ನೋಟುಗಳ ಮುಂಬದಿಯ ಮೇಲೆ ಮಾತ್ರ ಪ್ಲೇಟ್ ತಯಾರಿಕೆ ಹಂತದಲ್ಲಿ ೧೫೦ ಮೈಕ್ರೋನ್ ನಿಂದ ಹೆಚ್ಚು ಎದ್ದು ಕಾಣುವಂತೆ ಮಾಡಬಹುದು. ೫೦೦ ರೂ ಮತ್ತು ೧೦೦೦ ರೂ ನೋಟುಗಳು ಕೂಡ ಮುಂಬದಿ ಮೇಲೆ ಮಾತ್ರ ಎತ್ತರಿಸಿದ ಮುದ್ರಣವನ್ನು ಹೊಂದಿರುತ್ತವೆ. |
| ೧೩. | ಗುರುತು ಚಿಹ್ನೆ | ಎಲ್ಲಾ | ವಾಟರ್ ಮಾರ್ಕ್ ವಿಂಡೋನ ಎಡಬದಿಯಲ್ಲಿ ಎತ್ತರಿಸಿ ಮುದ್ರಿಸಿರುವ ೫೦ ರೂ ನೋಟಿನಲ್ಲಿ ಚೌಕಾಕೃತಿ, ೧೦೦ ರೂ ನೋಟಿನಲ್ಲಿನ ತ್ರಿಕೋನಾಕೃತಿ, ೫೦೦ ರೂ ನೋಟಿನಲ್ಲಿನ ವೃತ್ತ ಮತ್ತು ೧೦೦೦ ರೂ ನೋಟಿನಲ್ಲಿನ ವಜ್ರಾಕೃತಿಯು ನೋಟಿನ ವರ್ಗವನ್ನು ಗುರುತಿಸಲು ದೃಷ್ಟಿ ಹೀನರಿಗೆ ಸಹಾಯ ಮಾಡುತ್ತದೆ. | ಕೆತ್ತನೆಯ ಅಳವನ್ನು ೮೫ ಮೈಕ್ರೋನ್ ನಿಂದ ೧೬೦ ಮೈಕ್ರೋನ್‌ಗೆ ಹೆಚ್ಚಿಸಲಾಗುವುದು |
| ೧೪. | ಪ್ರತಿದೀಪ್ತಿ | ಎಲ್ಲಾ | ನೋಟಿನ ಅಂಕಿಯ ಪ್ಯಾನಲ್ ಗಳು ಮತ್ತು ಮಧ್ಯದ ಭಾಗ ದೀಪ್ತಿ ಗುಣವುಳ್ಳ ಶಾಯಿಯನ್ನು ಹೊಂದಿರುತ್ತವೆ. ಬ್ಯಾಂಕ್ ನೋಟುಗಳು ದ್ಯುತಿ ತಂತುವನ್ನು ಹೊಂದಿರುತ್ತವೆ. ನೋಟುಗಳನ್ನು ನೇರಳೆ ಬೆಳಕಿನ ಕಿರಣಗಳ ಆವೃತ್ತಿಗಿಂತ ಹೆಚ್ಚಿನ ಆವೃತ್ತಿಯುಳ್ಳ ದೀಪದ ಮುಂದೆ ಹಿಡಿದಾಗ ( ಅಲ್ಟ್ರಾ ವಾಯ್ಲಟ್ ಲ್ಯಾಂಪ್) ಎರಡೂ ಕಣ್ಣಿಗೆ ಕಾಣುತ್ತವೆ. | ಈಗ ಇರುವ ಭದ್ರತಾ ವೈಶಿಷ್ಟ್ಯ ಗಳು ಮುಂದುವರೆಯುತ್ತವೆ |

| | | | | |
|---|---|---|---|---|
| ೧೫. | ದ್ಯುತಿ ತಂತುಗಳು | ಎಲ್ಲಾ | ಒಂದೇ ಬಣ್ಣದ ದ್ಯುತಿ ತಂತುಗಳು | ಎರಡು ಬಣ್ಣದ ದ್ಯುತಿ ತಂತುಗಳು |